ಬಂದಿರಲಿಲ್ಲ. ಈ ವಿಷಯವನ್ನು ನಾವು ಎಕ್ಸಾಮಿನ್ ಮಾಡುತ್ತಾ ಇದ್ದೇವೆ. ಅವರಿಗಿಂತ ನನಗೆ ಚನ್ನಪಟ್ಟಣಕ್ಕೆ ಚನ್ನಪಟ್ಟಣಕ್ಕೆ ನೀರು ಕೊಡಬೇಕೆಂದು ಕಳಕಳಿ ಇದೆ, ಏಕೆಂದರೆ, ಇದು ನಮ್ಮ ಲಿಸ್ಟಲ್ಲಿ ಸೇರಿಸಿಕೊಂಡಿದ್ದೆ. ನಮ್ಮ ಮೆಗಾಸಿಟಿಯಲ್ಲಿ, ಬೆಂಗಳೂರಿನಲ್ಲಿರತಕ್ಕ ಆಕರ್ಷಣೆಯನ್ನು ತಪ್ಪಿಸುವುದಕ್ಕಾಗಿ, ಅಲ್ಲಿ ನಾವು ಡೆವಲಪ್‌ಮೆಂಟ್ ಮಾಡುತ್ತಿದ್ದೇವೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಾದತ್ ಅಲಿಖಾನ್ : ಮಾನ್ಯ ಅಧ್ಯಕ್ಷರೇ, ಪ್ರಸ್ತಾವನೆಯೇ ಇಲ್ಲ ಎಂದು ಅವರ ಉತ್ತರದಲ್ಲಿ ಹೇಳಿದ್ದಾರೆ. ಹಿಂದೆ, ಈ ಪ್ರಶ್ನೆ ಕೇಳಿದಾಗ, ಪ್ರಸ್ತಾವನೆ ಇದೆ ಎಂದು ಅವರೇ ಹೇಳಿದ್ದಾರೆ. ಅದನ್ನು ಅವರು ರೆಫರ್ ಮಾಡಲಿ. ಇನ್ನೊಂದು ಚನ್ನಪಟ್ಟಣದಲ್ಲಿ ಏನಾಗಿದೆ ಎಂದರೆ, ಕುಡಿಯುವ ನೀರಿನ 101 ಬೋರ್‌ವೆಲ್ಸ್ ಇದೆ.

ಅದರಲ್ಲಿ 40 ಬೋರ್‌ವೆಲ್ಸ್ ಡ್ರೈ ಆಗಿದೆ. ಮೊದಲು 150-200 ಅಡಿ ಆಳ ಇತ್ತು. ಈಗ ಹೋಗುತ್ತಾ ಹೋಗುತ್ತಾ 400 ರಿಂದ 500 ಅಡಿ ಆಳ ಹೋಗಿದೆ. ಅದು ಬಿಟ್ಟರೆ ನಮಗೆ ಬೇರೆ ಮಾರ್ಗವೇ ಇಲ್ಲ. ನೀರಿಗೆ ಅಲ್ಟರ್ನೇಟೀವ್ ಇಲ್ಲ. ಈಗ ನೀವು ಏನಾದರೂ ಕಾವೇರಿ ನೀರು ಕೊಡಲಿಲ್ಲ ಅಂದ್ರೆ ಮೆಗಾಸಿಟಿ ಮಾಡಿ ಏನು ಮಾಡುತ್ತೀರಿ. ಅದಕ್ಕೆ ಮೆಗಾಸಿಟಿ ಮಾಡುವುದಕ್ಕಿಂತ ಮುಂಚೆ ತಾವು ಈ ಕಾವೇರಿ ವಾಟರ್ ಮೊದಲು ಸ್ಯಾಂಕ್ಷನ್ ಮಾಡಿ. ಕ್ಯಾಬಿನೆಟ್ ಮುಂದೆ ತರಬೇಕೆಂದು ಚೀಫ್ ಮಿನಿಸ್ಟರ್ 4 ಸಾರಿ ಬರೆದಿದ್ದಾರೆ ಎಂದು ತಾವು ಹೇಳಿದಿರಿ. ಆದರೂ ಪ್ರೊಪೋಜಲ್ ಇಲ್ಲ ಎಂದು ಉತ್ತರ ಕೊಟ್ಟಿದ್ದೀರಿ, ಅದಕ್ಕೆ ತಾವು ಯಾವಾಗ ತೆಗೆದುಕೊಳ್ಳುತ್ತೀರಾ ಎಂದು ಸ್ವಲ್ಪ ಹೇಳಿ.

ಶ್ರೀ ಚೌಡರೆಡ್ಡಿ : ಮಾನ್ಯ ಅಧ್ಯಕ್ಷರೇ, ಅಧಿಕೃತವಾಗಿ ಪ್ರೊಪೋಜಲ್ ಆಗುವವರೆಗೂ ನಾವು ಹೇಳುವ ಹಾಗೆ ಇಲ್ಲ. ಅದನ್ನು ಪರಿಶೀಲನೆ ಮಾಡದೆ, ಏನೊಂದು ಕ್ರಮ ತೆಗೆದುಕೊಳ್ಳದೆ, ಪೂರ್ತಿ ಒಂದು ತೀರ್ಮಾನ ಮಾಡದೆ ಪ್ರೊಪೋಜಲ್ ಇದೆ ಎಂದು ಹೇಗೆ ನಾನು ಹೇಳುವುದಕ್ಕೆ ಆಗುತ್ತದೆ? ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಆರಮನೆ ರಸ್ತೆಯಲ್ಲಿರುವ ರೈಲು ಸೇತುವೆ ಕುರಿತು

158-ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರಮನೆ ರಸ್ತೆಯಲ್ಲಿ ಕುಮಾರ ಪಾರ್ಕ್ ಪಶ್ಚಿಮ ಮತ್ತು ಪ್ಯಾಲೇಸ್ ಗುಟ್ಟಹಳ್ಳಿ ಕಡೆಗೆ ಹೋಗುವ ರಸ್ತೆ ಹೊಸದಾಗಿ ನಿರ್ಮಿಸುತ್ತಿರುವ ರಸ್ತೆಯನ್ನು ಅಪೂರ್ಣವಾಗಿರುವುದರಿಂದ ಸಾರ್ವಜನಿಕರಿಗೆ ಸಾಕಷ್ಟು ಅನಾನುಕೂಲ ಉಂಟು ಮಾಡುವುದಲ್ಲದೆ ಆರ್ಥಿಕ ಮತ್ತು ಸಮಯದ ನಷ್ಟಗೈಯ್ಯುತ್ತಿದ್ದು ಅದನ್ನು ಏಕೆ ಪೂರ್ಣಗೊಳಿಸಲಾಗಿಲ್ಲ?

ಆ) ಯೋಚನೆಯಿಲ್ಲದೇ ಯೋಜನೆ ರೂಪಿಸಲು ಈ ರಸ್ತೆ ಕೆಲಸಕ್ಕೆಗೊಳ್ಳಲು ಕಾರಣರಾದ ವ್ಯಕ್ತಿಗಳಾರು? ಈ ಕಾರ್ಯಕ್ಕೆ ಅಂದಾಜು ಮಾಡಿದ ಮೊತ್ತವೆಷ್ಟು? ಅಗತ್ಯ ಭೂಮಿಯ ಭೂಸ್ವಾಧೀನ ಕ್ರಮವನ್ನು ಕ್ರಮಬದ್ಧವಾಗಿ ಕೈಗೆತ್ತಿಕೊಳ್ಳದೇ ಇರುವಾಗ ಈ ರಸ್ತೆ ನಿರ್ಮಾಣಕ್ಕಾಗಿ ಖರ್ಚು ಮಾಡಿದ ಮೊತ್ತವೆಷ್ಟು?

ಇ) ಈ ರಸ್ತೆ ಪೂರ್ಣಗೊಳಿಸಲು ಈ ಕೆಳಕಂಡವುಗಳಿಗಾಗಿ ಅಂದಾಜು ಮಾಡಿದ ವೆಚ್ಚವೆಷ್ಟು?

1) ಭೂ ಸ್ವಾಧೀನ
2) ರಸ್ತೆ ನಿರ್ಮಾಣ

3) ಬೇಕಾದ ಕಾಲಾವಧಿ

4) ಈಗಾಗಲೇ ಖರ್ಚು ಮಾಡಿದ ಮೊತ್ತವೆಷ್ಟು

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು)

ಅ) ಭೂ ಸ್ವಾಧೀನದ ಬಗೆಗಿನ ವ್ಯಾಜ್ಯದಿಂದಾಗಿ

ಆ) ಉಚ್ಚ ನ್ಯಾಯಾಲಯವು ಭೂ ಸ್ವಾಧೀನ ಕ್ರಮಕ್ಕೆ ತಡೆಯಾಜ್ಞೆ ನೀಡಿರುವುದರಿಂದ ಯಾರನ್ನೂ ಹೊಣೆಗಾರರನ್ನಾಗಿ ಮಾಡಲು ಬರುವುದಿಲ್ಲ.

ರೂ.

ಅಂದಾಜು ಮೊತ್ತ - 82.00 ಲಕ್ಷ

ಖರ್ಚು ಮಾಡಿದ ಮೊತ್ತ - 37.40 ಲಕ್ಷ

ಇ) 1) ರೂ. 98.20 ಲಕ್ಷ

2) ರೂ. 67.44 ಲಕ್ಷ

3) ನ್ಯಾಯಾಲಯ ತಡೆಯಾಜ್ಞೆ ತೆರವಾದ ನಂತರ.

4) ರೂ. 37.40 ಲಕ್ಷ.

ಶ್ರೀ ಎ.ಕೆ. ಅನಂತ ಕೃಷ್ಣ : ಮಾನ್ಯ ಅಧ್ಯಕ್ಷರೇ, ಸುಮಾರು 4 ವರ್ಷಗಳಿಂದ ಈ ಪ್ರಶ್ನೆ ಪದೇ ಪದೇ ಈ ಸದನದ ಮುಂದೆ ಬರುತ್ತಿದೆ. ಮಂತ್ರಿಗಳು ಬಹಳ ತಾತ್ಸಾರದಿಂದ ಉತ್ತರ ಕೊಡುತ್ತಿದ್ದಾರೆಂದು ನಾನು ಬಹಳ ತೀವ್ರವಾದ ಆಪಾದನೆ ಮಾಡಬೇಕಾಗಿದೆ. ಈ ಒಂದು ಬೆಂಗಳೂರು ನಾಗರೀಕರಿಗೆ ಸಮಸ್ಯೆ ಬಗೆಹರಿಸಬೇಕು, ಜನತೆಗೆ ಒಳ್ಳೆಯ ಕಾರ್ಯ ಮಾಡಬೇಕು ಎನ್ನುವ ಉತ್ಸಾಹ ಇದ್ದಿದ್ದರೆ ಆ ಸಂಬಂಧಪಟ್ಟಂತಹ ಕಡತಗಳನ್ನು ತರಿಸಿ ತೀವ್ರವಾಗಿ ಅದನ್ನು ಸ್ಪಡಿ ಮಾಡಿ ಯೋಚನೆ ಮಾಡಿ ಒಂದು ಉತ್ತರ ಕೊಡುವುದು ಸೂಕ್ತವಾಗಿತ್ತು. ಅದನ್ನು ಅವರು ಮಾಡಿಲ್ಲ. ಇದರಲ್ಲಿ ಏನು ಹೇಳುತ್ತಾರೆ ಎಂದರೆ, Because of litigation of land acquisgition ಎಂದು ಹೇಳುತ್ತಾರೆ. ಇದು ಯಾವಾಗ ಉದ್ಭವವಾಯಿತು. ಯಾರಿಂದ ಆಯಿತು, ಏತಕ್ಕೆ ಆಯಿತು? ಯೋಜನೆ ಮಾಡಿದಾಗ ಇದನ್ನೆಲ್ಲಾ ಯೋಚನೆ ಮಾಡಿರಲಿಲ್ಲವೇ? ಇದು ಬಹಳ ದೊಡ್ಡ ಯೋಜನೆ ಲಕ್ಷಾಂತರ ಜನಕ್ಕೆ ಕೊಡಬಾರದಂತಹ ಕಷ್ಟವನ್ನು ನಾವು ಕೊಡುತ್ತಿದ್ದೇವೆ. ಪರಿಹಾರ ಕೊಡಬೇಕು ಎಂದು ಕೇಳಿದರೆ ಲಿಟಿಗೇಶನ್ ಇದೆ ಎಂದು ಉತ್ತರ ಕೊಟ್ಟರೆ ಯಾವಾಗ ಸ್ವಾಮಿ ಲಿಟಿಗೇಶನ್ ಆಯಿತು?

ಶ್ರೀ ಚೌಡರೆಡ್ಡಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಅನಂತಕೃಷ್ಣರವರು ಮೇಯರ್ ಆಗಿದ್ದರು. ಜೊತೆಗೆ ಸಕ್ರಿಯವಾಗಿ ಭಾಗವಹಿಸಿತಕ್ಕಂಥ ಸದಸ್ಯರು. ಇದರಲ್ಲಿ ನಿಜವಾಗಿಯೂ ನನಗೆ ಗೊತ್ತಾಗುತ್ತಿದೆ. ನಾವು ಯಾವಾಗಲೂ ಜೊತೆಯಲ್ಲಿರುತ್ತಿದ್ದೆವು. ಮೊದಲು ಇದು ನನ್ನ ಗಮನಕ್ಕೆ ಬಂದಿರಲಿಲ್ಲ. ಈ ಪ್ರಶ್ನೆ ಬಂದಾಗ ನಾನು ಎಲ್ಲವನ್ನೂ ಕೂಲಂಕುಷವಾಗಿ ಪರಿಶೀಲನೆ ಮಾಡಿದೆ. ಜೊತೆಗೆ ನಾನು ಅಲ್ಲಿಗೆ ಹೋಗುತ್ತಿರುತ್ತೇನೆ. ಪ್ಯಾಲೇಸ್ ಗೇಟ್ನಿಂದ ಕುಮಾರ ಪಾರ್ಕ್‌ಗೆ ಹೋಗಬೇಕಾದರೆ ಡೀವಿಯೇಶನ್ ತೆಗೆದುಕೊಳ್ಳಬೇಕಾಗುತ್ತದೆ. ಅಲ್ಲಿ ಬಹಳ ಜನಕ್ಕೆ ತೊಂದರೆಯಾಗುತ್ತಿರುವ ವಿಚಾರವನ್ನು ನಾನಂತೂ ಇಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲ. ಇದರಲ್ಲಿ ಏನಾಗಿದೆ ಅಂದ್ರೆ ಈ ಕಡೆಯಿಂದ ರೋಡ್ ಮಾಡಿದ್ದಾರೆ. ಮೊದಲು ಅರ್ಡರ್ ಆಗಿರುವುದು 11-3-83ರಲ್ಲಿ. ಇದಕ್ಕೆ ಆಡಳಿತಾತ್ಮಕ ಮಂಜೂರಾತಿ ಕೊಟ್ಟಿದ್ದಾರೆ. ಸುಮಾರು 82 ಲಕ್ಷಕ್ಕೆ ಆಡಳಿತಾತ್ಮಕ ಮಂಜೂರಾತಿ ಕೊಟ್ಟು ಕೆಲಸ ಶುರು ಮಾಡಿದ ಮೇಲೆ ಈ ಟೆಂಡರ್ಸ್ ಎಲ್ಲಾ ತೆಗೆದುಕೊಂಡು ಈ ಕಡೆಯಿಂದ ರೋಡ್ ಮಾಡಿದ್ದಾರೆ. ವಸಂತ ನಗರದ ಪಕ್ಕದಲ್ಲಿ ರೋಡ್ ಮಾಡಿದ್ದಾರೆ. ಪ್ರೊಟೆಕ್ಷನ್ ವಾಲ್ ಕಟ್ಟಿದ್ದಾರೆ. ಅಲ್ಲಿ ಏನಾಗಿದೆ ಅಂದ್ರೆ, ಈ ಅರಮನೆ ಅವರಣಕ್ಕೆ ಬಂದ ತಕ್ಷಣ ಅಲ್ಲಿ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹುದ್ವಾರ್ರವರು

ಕೋರ್ಟ್ಗೆ ಹೋಗಿ ಫೋರ್ ಒನ್, ಸಿಕ್ಸ್, ಒನ್, ನೋಟಿಫಿಕೇಶನ್ ಆಗುವುದರೊಳಗಾಗಿ ಸ್ಟೇ ಆರ್ಡರ್ ತಂದಿದ್ದಾರೆ. ಹೈಕೋರ್ಟ್ ರಿಟ್ ಪಿಟಿಶನ್ ನಂಬರ್ 21059:86 ನಲ್ಲಿ ಸ್ಟೇ ಆರ್ಡರ್ ತೆಗೆದುಕೊಂಡಿದ್ದಾರೆ. ಸ್ಟೇ ಆರ್ಡರ್ ತೆಗೆದುಕೊಂಡ ಮಾತ್ರಕ್ಕೆಲ್ಲಾ 1983ನೇ ಇಸವಿಯಿಂದ ಸ್ವಲ್ಪ ನಿರ್ಲಕ್ಷ ಭಾವನೆ ಇದರಲ್ಲಿ ತೋರಿದ್ದಾರೆಂದು ಹೇಳಿದರೆ ಸ್ವಲ್ಪ ಮಟ್ಟಿಗೆ ಒಪ್ಪಿಗೆ ಆಗುತ್ತದೆ. ಹೈಕೋರ್ಟಿನಲ್ಲಿಯೇ ಸ್ಟೇ ಆರ್ಡರ್ ಕೊಟ್ಟ ಮೇಲೆ ಈ ಕಾರ್ಪೊರೇಷನ್ ಅಡ್ವೋಕೇಟ್ಸ್ ಅದನ್ನು ಪರ್ಸ್ಯೂ ಮಾಡಿ ಬೇಗ ವೆಕೇಟ್ ಮಾಡಿಸಬೇಕಾಗಿರುವುದು ಅವರ ಕರ್ತವ್ಯ ಆಗಿದೆ. ನಾನಂತು ಅದನ್ನು ಸರಿ ಎಂದು ಹೇಳತಕ್ಕಂಥ ಪ್ರವೃತ್ತಿಗೆ ಹೋಗುವುದಿಲ್ಲ. ಅದನ್ನು ಹೈಕೋರ್ಟಿನಲ್ಲಿ ಪರ್ಸ್ಯೂ ಮಾಡಿ ಬೇಗ ಅದನ್ನು ವೆಕೇಟ್ ಮಾಡಿಸಬೇಕಾಗಿದೆ. ಅದನ್ನು ಪ್ರಯತ್ನ ಮಾಡಬೇಕಾಗಿರತಕ್ಕಂಥಾದ್ದು ಕಾರ್ಪೊರೇಷನ್ ಮತ್ತು ಸರ್ಕಾರ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಇನ್ನು ಮಿಕ್ಕ ಟ್ರಾಫಿಕ್ಗೆ ಈ ಕಡೆ ರೋಡ್ ಎಲ್ಲಾ ಬಿಟ್ಟಿದ್ದೇವೆ. ಈಗ ಏನಿದ್ದರೂ ಆ ಬ್ರಿಡ್ಜ್ ಕಟ್ಟಿ ಕುಮಾರ ಪಾರ್ಕ ವೆಸ್ಟ್ ಕಡೆ ಹೋಗುವುದಕ್ಕೆ ಮಾತ್ರ ನಿಂತಿದೆ. ಈಗಾಗಲೇ ನಾವು ಬೇರೆ ಕಡೆ ವಸಂತನಗರ ಪಕ್ಕದಲ್ಲಿ ರೋಡ್ ಹೋಗುವುದಕ್ಕೆ ವೆಚ್ಚ ಮಾಡಿರುವುದು 37 ಲಕ್ಷ 39 ಸಾವಿರದ 144 ರೂಪಾಯಿಗಳು. ಬೇಗ ಸ್ಟೇ ವೆಕೇಟ್ ಮಾಡಿಸಿ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿಸುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ : ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ಬಹಳ ಮೂಲಭೂತವಾದುದು. ಈ ವಸಂತನಗರದ ಕಡೆ ಇರುವ ರಸ್ತೆ ವಿಚಾರ ನಾವು ಚರ್ಚೆ ಮಾಡಿಲ್ಲ. ಮಾನ್ಯ ಮಂತ್ರಿಗಳು ಅದರ ವಿಷಯದಲ್ಲಿ ಉತ್ತರ ಕೊಡಬೇಕಾದ ಅವಶ್ಯಕತೆ ಇರಲಿಲ್ಲ. ಮುಖ್ಯವಾಗಿ ಇರುವುದೆಂದರೆ, ಯಾವ ಕಾರಣಕ್ಕೆ ಅಂಡರ್ ಬ್ರಿಡ್ಜ್ನಿಂದ ರಸ್ತೆ ಮಾಡಬೇಕಾಗಿತ್ತು ಯಾವ ಸಮಸ್ಯೆಯನ್ನು ಅಲ್ಲಿ ಬಗೆಹರಿಸಬೇಕಾಗಿತ್ತು ಅದು ಬಗೆ ಹರಿದಿಲ್ಲ. ಇದಕ್ಕೆ ಕಾರಣಕರ್ತರಾದವರು ಯಾರು, ಯಾರು ಜವಾಬ್ದಾರರು ಎಂದರೆ ಯಾರೂ ಜವಾಬ್ದಾರರು ಅಲ್ಲ ಎಂದು ಹೇಳಿದರೆ ಹೇಗೆ? 1983ರಲ್ಲಿ ಈ ಯೋಜನೆಯನ್ನು ಹಾಕಿಕೊಂಡಾಗ ಸಮಗ್ರವಾಗಿ ಯೋಚನೆ ಮಾಡಿ ಮಾಡಬೇಕಾದಂತಹ ಕರ್ತವ್ಯ ನಗರಪಾಲಿಕೆಗೆ ಬೇಕಾಗಿರಲಿಲ್ಲವೇ? ಅದರಲ್ಲೂ ಬಹಳ ಸೀನಿಯರ್ ಐ.ಎ.ಎಸ್ ?ಅಧಿಕಾರಿಗಳು ಆಡಳಿತಾಧಿಕಾರಿಗಳು ಆಗಿದ್ದಾಗ ಅಲ್ಲಿನ ಮುಖ್ಯ ಇಂಜನೀಯರ್ ಇಲ್ಲಿನ ಸೆಕ್ರೇಟರಿಗಳು ಆಗಿ ಹೋಗಿದ್ದಾರೆ. ಅಂತಹವರು ಮಾಡಬೇಕಾದಂತಹ ಕಾಲದಲ್ಲಿ ಸರಿಯಾಗಿ ಮಾಡಿಲ್ಲ ಅಂದ್ರೆ ಜವಾಬ್ದಾರಿ ಯಾರು ಅಲ್ಲ ಅಂದ್ರೆ ಅರ್ಥ ಏನಿದೆ? ಲಕ್ಷಾಂತರ ಜನಕ್ಕೆ ಅಲ್ಲಿ ಕಷ್ಟವಾಗುತ್ತಿದೆ. ಆದರೂ ಸರ್ಕಾರದ್ದು ಜವಾಬ್ದಾರಿ ಇಲ್ಲ, ನಗರಪಾಲಿಕೆಯದ್ದೂ ಜವಾಬ್ದಾರಿ ಇಲ್ಲ ಅಂದ್ರೆ ಇದು ಬಹಳ ಬೇಜವಾಬ್ದಾರಿ ಉತ್ತರ ಎಂದು ನಾನು ಹೇಳುತ್ತಿದ್ದೇನೆ. ದಯವಿಟ್ಟು ಅದರ ಬಗ್ಗೆ ತಾತ್ಸಾರ ಮಾತ್ರ ಅಲ್ಲ ಮಾನ್ಯಮಂತ್ರಿಗಳು ಅರ್ಥ ಮಾಡಿಕೊಳ್ಳಬೇಕು.

ಆಲ್ಟರ್ನೇಟೀವ್ ಏನು ಎಂದು ಹೇಳಿ. ಅಲ್ಲಿ ಸ್ಟೇ ಈಗ ವೆಕೇಟ್ ಮಾಡಿಸುತ್ತೇನೆಂದು ಹೇಳುತ್ತಿದ್ದಾರೆ. ವೆಕೇಟ್ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದಾರೆ? ಅಡ್ವೋಕೇಟ್ ಜನರಲ್ರನ್ನು ಕರೆದು ಹೇಳಿದ್ದಾರೆಯೇ? ಇಲ್ಲವೇ ನಗರ ಪಾಲಿಕೆಯ ವಕೀಲರಿಗೆ ಆ ಕಮೀಷನರ್ ಏನಾದರೂ ವೆಕೇಟ್ ಮಾಡಿಸಬೇಕು ಎಂದು ಹೇಳಿದ್ದಾರೆಯೇ? ನನಗೆ ತಿಳಿದುಬಂದ ಪ್ರಕಾರ ಆ ಮಹಾರಾಜರ ಮಕ್ಕಳಾದಂತಹವರು ಯಾರು ಇವತ್ತು ಆಸ್ತಿಯ ಓನರ್ ಆಗಿದ್ದಾರೆ ಅವರ ಹತ್ತಿರ ಹೋಗಿ ನೇರವಾಗಿ ಕುಳಿತುಕೊಂಡು ಸಂಪರ್ಕ ಮಾಡಿ ಮಾತುಕತೆ ಮಾಡಿದ್ದರೆ ಅವರು ಒಪ್ಪಿಕೊಳ್ಳುವುದಕ್ಕೆ ತಯಾರಾಗಿದ್ದಾರೆ. ನಮ್ಮಲ್ಲಿ ಅವರಿಗೆ ಕೊಡಬೇಕಾದಂತಹ ಗೌರವವನ್ನು ಕೊಟ್ಟು, ಅವರ ಜಾಗವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡದಿರುವ ಕಾರಣದಿಂದ ಅಲ್ಲಿ ಲಕ್ಷಾಂತರ ಜನಗಳಿಗೆ ತೊಂದರೆಯಾಗುತ್ತಿದೆ ಎನ್ನುವ ಮಾತನ್ನು ತಾವು ಅರ್ಥಮಾಡಿಕೊಳ್ಳಬೇಕು. ಹಿಂದೆ ದಿವಂಗತ ಮಹಾರಾಜರು ಇದ್ದಂತಹ ಕಾಲದಲ್ಲಿ ಅದೇ ಸ್ಯಾಂಕಿ ರಸ್ತೆಯನ್ನು ನಾವು

ದೊಡ್ಡದಾಗಿ ಮಾಡಬೇಕು ಎಂದು ಅವರಲ್ಲಿ ನಾವು ನೇರವಾಗಿ ಹೋಗಿ ಮಾತನಾಡಿದ ಮೇಲೆ ಅವರು ಆ ಜಾಗವನ್ನು ಬಿಟ್ಟಮೇಲೆ ತ್ರೀ ಲೈನ್ ಟ್ರಾಫಿಕ್ ಮಾಡುವುದಕ್ಕೆ ಸಾಧ್ಯವಾಗಿದೆ. ಈ ಕೆಲಸವನ್ನು ಮಾಡದೆ ಪ್ರತಿ ಸಾರಿಯೂ ನಾನು ಕಮಿಷನರನ್ನು ಕರೆದುಕೊಂಡು ಹೋಗುತ್ತಿದ್ದೇನೆ. ಪ್ರತಿ ಮುಖ್ಯ ಇಂಜನೀಯರ್‌ನ್ನು ಕರೆದುಕೊಂಡು ಹೋಗುತ್ತಿದ್ದೇನೆ. ಅಂದರೆ ಕೆಲಸ ಆಗುತ್ತದೆಯೇ? ಇದುವರೆಗೂ ಅವರು ಗಮನ ಕೊಟ್ಟಿಲ್ಲ. ಒಂದು ಮೆಟ್ಟಲು ಹಾಕಿ ಜನಗಳು ಅದರೂ ನಡೆದುಕೊಂಡು ಹೋಗಲಿ ಎಂದು ಹೇಳಿದರೆ ಅದೂ ಕೂಡ ಮಾಡಿಲ್ಲ, ಏತಕ್ಕೆ ಮಾಡಲಿಲ್ಲ ಸ್ವಾಮಿ?

ಶ್ರೀ ಚೌಡರೆಡ್ಡಿ : ಮಾನ್ಯ ಅಧ್ಯಕ್ಷರೇ, ಇದು ಕಾರ್ಪೊರೇಷನ್ನವರು ಮಾಡಬೇಕಾಗಿದೆ. ಇದು 1986ನೇ ಇಸವಿಯಿಂದ ಪೆಂಡಿಂಗ್ ಇದೆ. ಈ ಪ್ರಶ್ನೆ ಬಂದಾಗ ನನ್ನ ಗಮನಕ್ಕೆ ಬಂದಿದೆ. ಕೋರ್ಟಿನಲ್ಲಿರುವ ಸ್ಟೇ ಆರ್ಡರ್ ವೆಕೇಟ್ಮಾಡಬೇಕಾಗಿದೆ. ಕೋರ್ಟಿನಲ್ಲಿರುವ ಸ್ಟೇ ಆರ್ಡರನ್ನು ಅಡ್ವೊಕೇಟ್‌ಗೆ ಹೇಳಿ ವೆಕೇಟ್ ಮಾಡಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಇನ್ನೊಂದು ಈಗ ಹೇಳಿದ್ದೆಲ್ಲಾ ಸರಿ ಇಲ್ಲ ಎಂದು ಹೇಳಿದರು. ಪ್ಯಾಲೇಸ್ ರೋಡ್‌ನಿಂದ ತಾನೇ ಹೋಗುವುದು. ಅದು ಕಂಟಿನಿಟಿ ರೋಡ್ ಇದರಲ್ಲಿ ಬರೀ ಬ್ರಿಡ್ಜೆ ಎಂದು ಸಪರೇಟ್ ಇಲ್ಲ. ಪ್ಯಾಲೇಸ್ ರೋಡ್ನಿಂದ ಸೀದಾ ಹೋಗಿ ಅರಮನೆ ಮುಂದೆ ಹೋಗಿ ಪುನಃ ಕುಮಾರಪಾರ್ಕ್‌ಗೆ ಹೋಗುತ್ತದೆ. ಕಂಪ್ಲೀಟ್ ಆಗಿ ವಸಂತನಗರದ ಕಡೆ ಹೋಗಬೇಕು ಎಂದು ನಾನು ಹೇಳುತ್ತಿಲ್ಲ. ವಸಂತ ನಗರದ ಮುಂದೆ ಹೋಗತಕ್ಕಂಥಾದ್ದು. ಅಲ್ಲಿ ಮೌಂಟ್ ಕಾರ್ಮಲ್ ಕಾಲೇಜು ಇದೆ. ವಸಂತ ನಗರದ ಮುಂದೆ ಈ ರೋಡ್ ಹೋಗುತ್ತದೆ. ಅದು ಕಂಟಿನ್ಯೂಟಿ ಇದೆ. ಬ್ರಿಡ್ಜ್ ಕೆಲಸ ಮಾಡುವುದಕ್ಕೆ ಬಂದಾಗ ಸ್ಟೇ ಆರ್ಡರ್ ಆಗಿದೆ. ಅದಕ್ಕೆ ನಾವು ಏನು ಮಾಡುವುದಕ್ಕೆ ಆಗುತ್ತದೆ? ಅದನ್ನು ನಾವು ವೆಕೇಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈ ಪ್ರಶ್ನೆ ಬಂದಾಗ ಈ ವಿಷಯ ನನ್ನ ಗಮನಕ್ಕೆ ಬಂದಿದೆ. ನಾನು ನನ್ನ ಕೈಯಲ್ಲಿ ಆದಷ್ಟು ಪ್ರಯತ್ನ ಮಾಡುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ : ಮಾನ್ಯ ಅಧ್ಯಕ್ಷರೇ, ಅಲ್ಲಿ ಜನ ನಡೆದು ಹೋಗುವುದಕ್ಕೆ ಕಷ್ಟ ಆಗಿದೆ. ಕಾರುಗಳು ಮತ್ತು ಸ್ಕೂಟರ್ಗಳು ಹೋಗುವುದಕ್ಕಂತೂ ಆಗುತ್ತಿಲ್ಲ. ಅಲ್ಲಿಂದ ಹತ್ತಿ ಮೇಲೆ ರಸ್ತೆಗೆ ಬರುವುದಕ್ಕೆ ಅವಕಾಶ ಇಲ್ಲ. ಇದು ಬಹಳ ಸಣ್ಣ ವಿಷಯ. ಅಲ್ಲಿ ಮೆಟ್ಟಲುಗಳು ಹಾಕಿದರೆ ಅನುಕೂಲವಾಗುತ್ತದೆ. ಎಲ್ಲಿ ನಿಂತು ಹೋಗಿದೆ ಆ ಭಾಗದಲ್ಲಿ ಕೇವಲ ಒಂದು ಸ್ಟೇರ್ ಕೇಸ್ ಹಾಕಿ ಆ ಸ್ಟೇರ್ಕೇಸ್ ಹಾಕುವುದಕ್ಕೆ ಕಷ್ಟ ಏನಾಗಿದೆ?

ಅಧ್ಯಕ್ಷರು : ಮಂತ್ರಿಗಳು ಹೋಗಿ ಸ್ವಲ್ಪ ಪರಿಶೀಲನೆ ಮಾಡಿ ನೋಡಿ.

ಶ್ರೀ ಎ.ಕೆ. ಅನಂತಕೃಷ್ಣ : ಪರಿಶೀಲನೆ ಪ್ರಶ್ನೆ ಅಲ್ಲ ಸ್ವಾಮಿ ಸ್ವಲ್ಪ ಕಷ್ಟಪಟ್ಟರೆ 50 ಅಡಿ ಮೆಟ್ಟಲು ಹಾಕಬೇಕು ಅಷ್ಟೆ.

ಶ್ರೀ ರಾಮಲಿಂಗರೆಡ್ಡಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೇ, ನಾನು ಬೆಂಗಳೂರು ನಗರದಲ್ಲಿರುವವನು. ಅಲ್ಲಿ ತೊಂದರೆ ಬಹಳ ಆಗುತ್ತಿದೆ. ಮಾನ್ಯ ಅನಂತಕೃಷ್ಣರವರು ಅಸೆಂಬ್ಲಿಯಲ್ಲಿ ಪ್ರಶ್ನೆ ಮಾಡುವಂತಹ ವಿಷಯವೇ ಅಲ್ಲ. ಕಾರ್ಪೊರೇಷನ್ನವರು ಇದನ್ನು ಸಾಧ್ಯವಾದಷ್ಟು ಬೇಗ ಮಾಡಬೇಕು. ಅಲ್ಲಿ ಪ್ರತಿದಿನ ಸಾವಿರಾರು ಜನಕ್ಕೆ ತೊಂದರೆ ಆಗುತ್ತಿದೆ. ಮಾನ್ಯ ಅನಂತಕೃಷ್ಣರವರು ಏನು ಹೇಳುತ್ತಿದ್ದಾರೆ, ಅದಕ್ಕೆ ನಾನು ಸಹ ಧ್ವನಿಗೂಡಿಸುತ್ತೇನೆ.

ಶ್ರೀ ಚೌಡರೆಡ್ಡಿ : ಇದು ನನ್ನ ಗಮನಕ್ಕೆ ಬಂದಿದೆ. ನಾನು ನನ್ನ ಕೈಲಾದಷ್ಟು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ.ಎಚ್. ರಂಗನಾಥ್ (ಲೋಕೋಪಯೋಗಿ ಸಚಿವರು) : ಮಾನ್ಯ ಅನಂತಕೃಷ್ಣರವರು ಮಹಾರಾಜರ ಮಕ್ಕಳ ಜೊತೆಯಲ್ಲಿ ಮಾತುಕತೆ ಮಾಡಿ ಎಂದು

ಹೇಳಿದ್ದಾರೆ. ಕೋರ್ಟಿನಲ್ಲಿರತಕ್ಕಂಥ ವಿಚಾರ ಬೇರೆ. ಅದನ್ನು ಶೀಘ್ರವಾಗಿ ತೆರೆವು ಮಾಡತಕ್ಕಂಥ ಪ್ರಯತ್ನ ಮಾಡೋಣ. ಮಾಲೀಕರು ಯಾರು ಇದ್ದಾರೆ ಅವರನ್ನು ಭೇಟಿ ಮಾಡಿ ಮಾತುಕತೆ ಮಾಡಿ ಎನ್ನುವ ಇನ್ನೊಂದು ಸಲಹೆ ಮಾಡಿದ್ದಾರೆ. ನಾನು ಮುಖ್ಯ ಮಂತ್ರಿಗಳಿಗೆ ಈ ವಿಷಯವನ್ನು ತಿಳಿಸುತ್ತೇನೆ. ನಾವು ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರ ಅವಧಿ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಬೇಲೂರಿನಲ್ಲಿ ಮನೆಗಳ ನಿರ್ಮಾಣ ಕುರಿತು

192 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ಗೃಹ ಮಂಡಳಿಯವರು ಬೇಲೂರಿನಲ್ಲಿ ಮನೆಗಳನ್ನು ಕಟ್ಟಿಸಿಕೊಡುವುದಾಗಿ ಸಾರ್ವಜನಿಕರಿಂದ ಹಣ ವಸೂಲು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಯಾವ ವರ್ಷ ಠೇವಣಿ ಹಣವನ್ನು ವಸೂಲು ಮಾಡಲಾಯಿತು?*

ಇ) *ಈವರೆಗೆ ಮನೆ ಕಟ್ಟದಿರುವ ಕಾರಣಗಳೇನು? ಹಾಗೂ ಠೇವಣಿದಾರರಿಗೆ ಹಣಕ್ಕೆ ಬಡ್ಡಿ ಕೊಡಲಾಗುವುದೇ?*

ಈ) *ಮನೆಗಳನ್ನು ಕಟ್ಟಿಸಿಕೊಡಲು ಎಷ್ಟು ವರ್ಷಗಳು ಬೇಕಾಗುವುದು?*

ಶ್ರೀ ಗೋಪಿನಾಥ್ ಆರ್. ಸಾಂಡ್ರಾ (ವಸತಿ ಸಚಿವರು) :

ಅ) ಹೌದು.

ಆ) 1984 ರಲ್ಲಿ ಅರ್ಜಿ ಜೊತೆಗೆ ನೋಂದಣಿ ಶುಲ್ಕವನ್ನು ಸ್ವೀಕರಿಸಲಾಗಿದೆ.

ಇ) ಭೂಸ್ವಾಧೀನಾಧಿಕಾರಿಗಳು ಮಧ್ಯ ಭಾಗಕ್ಕೆ ಜಮೀನನ್ನು ಬಿಟ್ಟು 3 ತುಂಡುಗಳಲ್ಲಿ ಸ್ವಾಧೀನ ಗೊಳಿಸಿದ್ದರಿಂದ ಬಡಾವಣೆ ನಕ್ಷೆ ತಯಾರಿಸಲು ಸಾಧ್ಯವಾಗಿರುವುದಿಲ್ಲ. ಠೇವಣಿ ಹಣಕ್ಕೆ ಬಡ್ಡಿ ಕೊಡುವುದಕ್ಕೆ ಅವಕಾಶವಿರುವುದಿಲ್ಲ.

ಈ) ಭೂಸ್ವಾಧೀನದಲ್ಲಿ ಬಿಟ್ಟು ಹೋಗಿರುವ ಜಮೀನು ಪಡೆದ ತಕ್ಷಣ ಯೋಜನೆಯನ್ನು ಪ್ರಾರಂಭಿಸಲಾಗುವುದು.

ಹೇಮಾವತಿ ನದಿಯಿಂದ ಬೆಂಗಳೂರು ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಬಗ್ಗೆ

191 - ಶ್ರೀ ಆರ್.ವಿ. ದೇವರಾಜ್ (ಚಾಮರಾಜಪೇಟೆ) : ಮಾನ್ಯ ನಗರಾಭಿವೃದ್ಧಿ ಸಚಿವರು . ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರಕ್ಕೆ ಹೇಮಾವತಿ ನದಿಯಿಂದ ನೀರನ್ನು ತರುವ ಬಗ್ಗೆ ಸರ್ಕಾರ ಯೋಜನೆಯನ್ನು ತಯಾರಿಸಿದೆಯೇ?*

ಆ) *ಹಾಗಿದ್ದಲ್ಲಿ ಅದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು?*

ಇ) *ಅದರಿಂದ ಎಷ್ಟು ಪ್ರಮಾಣದ ನೀರು ಬೆಂಗಳೂರು ನಗರಕ್ಕೆ ಸಿಗುವುದು?*

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ.